ಕಳುಹಿಸದೇ ಇರುವುದರಿಂದ ಡಿ.ಪಿ.ಸಿ. ಕ್ಲಿಯರ್ ಆಗದೇ ಇರುವುದರಿಂದ ಅವರಿಗೆ ಲೆಕ್ಚರರ್‌ರಿಂದ ಅಸಿಸ್ಟೆಂಟ್ ಪ್ರೊಫೆಸರ್‌ಗೆ ಬಡ್ತಿ ಸಿಕ್ಕಿಲ್ಲ. ಮೊನ್ನೆ ಅದು ಅಟಾನಮಸ್ ಆದಮೇಲೆ ಇವರಿಗೆ ಅನ್ಯಾಯ ಆಗುತ್ತಿದೆ ಎಂದು, ಡಿ.ಪಿ.ಸಿ. ಆಗದೇ ಇದ್ದರೂ ಇವರ ಸರ್ವೀಸ್‌ನ್ನು ಗಣನೆಗೆ ತೆಗೆದುಕೊಂಡು ಒಂದೇ ಸಾರಿ ಅವರನ್ನು ಪ್ರೊಫೆಸರ್ ಮಾಡುವುದಕ್ಕೆ ಆಗುವುದಿಲ್ಲ ಎನ್ನುವ ಉದ್ದೇಶದಿಂದ ಅವರನ್ನು ಅಸಿಸ್ಟಂಟ್ ಪ್ರೊಫೆಸರ್ ಮಾಡಿದ್ದೇವೆ. ಅಸಿಸ್ಟಂಟ್ ಪ್ರೊಫೆಸರ್ ಆಗಿ ಐದು ವರ್ಷ ಕೆಲಸಮಾಡಿದ ಮೇಲೆ ಅವರು ಪ್ರೊಫೆಸರ್ ಆಗುವುದಕ್ಕೆ ಅರ್ಹರಿರುತ್ತಾರೆ. ಯಾರಿಗೂ ನೇರವಾಗಿ ಲೆಕ್ಚರರ್‌ರಿಂದ ಪ್ರೊಫೆಸರ್ ಆಗಿ ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ. ಮೊದಲು ಅಸಿಸ್ಟಂಟ್ ಪ್ರೊಫೆಸರ್ ಆಗಬೇಕು, ಆಮೇಲೆ ಪ್ರೊಫೆಸರ್ ಆಗಬೇಕೇ ಹೊರತು ಲೆಕ್ಚರರ್‌ರಿಂದ ಪ್ರೊಫೆಸರ್ ಆಗುವುದಕ್ಕೆ ಆಗುವುದಿಲ್ಲ. ಅವರಿಗೆ ಕಲಿಸಿದಂತಹವರು ಬೇರೆ ಕಾಲೇಜಿನಲ್ಲಿದ್ದಾಗ ಅಸಿಸ್ಟೆಂಟ್ ಪ್ರೊಫೆಸರ್ ಆಗಿ ಐದು ವರ್ಷ ಕೆಲಸ ಮಾಡಿ ಇಲ್ಲಿ ಇಂಟರ್‌ವ್ಯೂಗೆ ಅಟೆಂಡ್ ಆಗಿರುವುದರಿಂದ ಅವರನ್ನು ಪ್ರೊಫೆಸರ್ ಆಗಿ ತೆಗೆದುಕೊಂಡಿದ್ದಾರೆಯೇ ಹೊರತು ನೇರವಾಗಿ ಯಾರನ್ನೂ ಲೆಕ್ಚರರ್‌ರಿಂದ ಪ್ರೊಫೆಸರ್ ಆಗಿ ತೆಗೆದುಕೊಂಡಿಲ್ಲ. ತೆಗೆದುಕೊಳ್ಳುವುದಕ್ಕೂ ಬರುವುದಿಲ್ಲ.

ಋ) ಬಂಡೀಪುರ ರಾಷ್ಟ್ರೀಯ ಉದ್ಯಾನವನದಲ್ಲಿ ಕಾಡ್ಗಿಚ್ಚಿನಿಂದ ಮರಗಳ ನಾಶ

ಶ್ರೀ ಹೆಚ್.ಎನ್. ಮಹದೇವ್ ಪ್ರಸಾದ್ (ಗುಂಡ್ಲುಪೇಟೆ) : ಸನ್ಮಾನ್ಯ ಅಧ್ಯಕ್ಷರೆ, ಬಂಡೀಪುರ ಉದ್ಯಾನವನದಲ್ಲಿ ಬಿಣಗಿನಿಂತಿರುವ ಮತ್ತು ಬಿದ್ದಿರುವ ಮರಗಳಿಂದ ಬೇಸಿಗೆಕಾಲದಲ್ಲಿ ಕಾಣಿಸಿಕೊಳ್ಳುವಂಥ ಕಾಡ್ಗಿಚ್ಚಿನಿಂದ ತಿಂಗಳುಗಟ್ಟಲೆ ಅರಣ್ಯ ಬೆಂಕಿಯಲ್ಲಿ ನಾಶವಾಗುತ್ತಿದೆ. ವರ್ಷವರ್ಷ ಬಹಳಷ್ಟು ಅರಣ್ಯ ಈ ರೀತಿಯ ಕಾಡ್ಗಿಚ್ಚಿನಿಂದ ನಾಶವಾಗುತ್ತಿದೆ. ಇದನ್ನು ತಪ್ಪಿಸುವುದಕ್ಕೆ ಹಾಗೂ ಅಲ್ಲಿ ಬಹಳ ಬೆಲೆ ಬಾಳುವ ಮರಗಳು ಬಹಳ ವರ್ಷಗಳಿಂದ ಬಿಣಗಿಬಿದ್ದು ಹಾಗೆಯೇ ಇದೆ, ಆದ್ದರಿಂದ ಆ ಉದ್ಯಾನವನಕ್ಕೆ ಯಾವುದೇ ತೊಂದರೆಯಾಗದಂತೆ ಅದನ್ನು ತೆಗೆಸುವ ಬಗ್ಗೆ ಸರ್ಕಾರ ಕ್ರಮ ಕೈಗೊಳ್ಳುವುದಕ್ಕೆ ಯೋಚನೆ ಮಾಡಿದೆಯೇ ಎಂದು ಮಾನ್ಯ ಸಚಿವರಲ್ಲಿ ಕೇಳಬಯಸುತ್ತೇನೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಅರಣ್ಯ ಸಚಿವರು) : ಸನ್ಮಾನ್ಯ ಅಧ್ಯಕ್ಷರೆ, ವನ್ಯಜೀವಿ ಸಂರಕ್ಷಣಾ ಕಾಯಿದೆ 1972ರ ತಿದ್ದುಪಡಿ 1991 35(6)ರ ಪ್ರಕಾರ ರಾಷ್ಟ್ರೀಯ ಉದ್ಯಾವನಗಳಲ್ಲಿ ಯಾವ ವ್ಯಕ್ತಿಯೇ ಆಗಲೀ, ಯಾವುದೇ ವಿಧವಾದ ವಿನಾಶಕಾರಿ ಕೃತ್ಯಗಳಾಗಲೀ ಅಂದರೆ ಪ್ರಾಣಿಸಂಕುಲ ಹಾಗೂ ಅವುಗಳ ಆವಾಸಸ್ಥಾನ ಇವುಗಳನ್ನು ಕಾಪಾಡುವ ಹಿತದೃಷ್ಟಿಯಿಂದ ಹಾಳು ಮಾಡುವಂತಿಲ್ಲ. ಹಾಗೂಮ್ಮೆ ಪ್ರಾಣಿಗಳ ಆವಾಸಸ್ಥಾನಗಳ ಅಭಿವೃದ್ಧಿ ಉತ್ತಮಗೊಳಿಸುವ ದೃಷ್ಟಿಯಿಂದ ಯಾವುದೇ ಕಾರ್ಯಚಟುವಟಿಕೆಗಳನ್ನು ಕೈಗೊಳ್ಳಬೇಕಾದಲ್ಲಿ ಮುಖ್ಯ ವನ್ಯಪ್ರಾಣಿ ಪರಿಪಾಲಕರು, ರಾಜ್ಯ ಸರ್ಕಾರ ಪೂರ್ವಾನುಮತಿಯ ಮೇರೆಗೆ ಅನುಮತಿ ನೀಡಬಹುದಾಗಿದೆ. ಮತ್ತು ಯಾವುದೇ ರೀತಿಯ ಸಾಮಾನ್ಯ ಹಿತದೃಷ್ಟಿಗಳ ಕಾರ್ಯಕಲಾಪಗಳನ್ನು ಕೈಗೊಳ್ಳುವ ಬಗ್ಗೆ ನಿರ್ಧಾರ ನಿಲುವನ್ನು ರಾಜ್ಯಸರ್ಕಾರದ ವನ್ಯಜೀವಿ ಸಲಹಾಮಂಡಳಿಯ ಅಭಿಪ್ರಾಯದ ಮೇರೆಗೆ ನಿರ್ವಹಿಸಬೇಕಾಗಿರುತ್ತದೆ. ರಾಷ್ಟ್ರೀಯ ಉದ್ಯಾನವನವನ್ನು ನಿರ್ಮಾಣ ಮಾಡುವ ಕಾಲಕ್ಕೆ ಶೇಕಡ ಎರಡು ಅರಣ್ಯ ಪ್ರದೇಶಗಳನ್ನು ಮಾತ್ರ

ಯಾವುದೇ ವಿಧವಾದ ಚಟುವಟಿಕೆಗಳಿಂದ ಶಾಂತಿ ಭಂಗವಾಗದಂತೆ ಉದ್ದೇಶಿಸಿ ಪೋಷಿಸಲ್ಪಟ್ಟಿದೆ. ಪ್ರಸ್ತುತ ಪ್ರಕೃತಿ ವಿಕೋಪದಿಂದಾಗಿ ಕೆಲವು ಗಿಡಮರಗಳು ಒಣಗಿ ಬಿದ್ದು ನಶಿಸುತ್ತಿರುವುದು ಸಹಜವಾಗಿರುತ್ತದೆ. ಹೀಗೆ ಬಿದ್ದಿರುವ ಗಿಡಮರಗಳು ಪರಿಸರ ಪ್ರಿಯರಿಗೆ ಹಾಗೂ ಜೈವಿಕ ಚಟುವಟಿಕೆಗಳ ಆವಾಸಸ್ಥಾನಗಳೆನಿಸಿ ಪ್ರದೇಶ ಭೂಪಲವತ್ತನ್ನು ಉತ್ತಮಗೊಳಿಸುವಲ್ಲಿ ಸಹಕಾರಿಯಾಗಿರುತ್ತದೆ. ಕಾಡ್ಗಿಚ್ಚು ಉಂಟಾಗುವ ಪ್ರಶ್ನೆಯನ್ನು ಅಲ್ಲಗಳೆಯುವಂತಿಲ್ಲ, ಇವುಗಳನ್ನು ತಡೆಗಟ್ಟಲು ಈ ಇಲಾಖೆಯು ಈ ಕೆಳಕಂಡ ಕ್ರಮಗಳನ್ನು ಅನುಸರಿಸುತ್ತಾ ಹಾಗೂ ಯಶಸ್ವಿ ಪಡೆದಿದೆ. ಸೂಕ್ಷ್ಮ ಪ್ರದೇಶಗಳಲ್ಲಿ ಅಲ್ಲಲ್ಲಿ ವೀಕ್ಷಣಾ ಗೋಪುರಗಳನ್ನು ನಿರ್ಮಿಸಿದ್ದು ನಿಶ್ತಂತು ಉಪಕರಣಗಳ ಮೂಲಕ ಸಂದೇಶ ಹಾಗೂ ವಿಚಾರವಿನಿಮಯ ಶೀಘ್ರ ರೀತಿಯಲ್ಲಿ ನಡೆಯುವಂತೆ ಲಭ್ಯಗೊಳಿಸಲಾಗಿದೆ. ಹಾಲೀ ಇರುವ ಸಿಬ್ಬಂದಿವರ್ಗದವರ ಜೊತೆಗೆ ಬೆಂಕಿ ಜೀಳುವ ಸಂದರ್ಭದ ಕಾಲದಲ್ಲಿ ಪಂಗಾಮಿ ಬೆಂಕಿ ವಾಚಕರುಗಳನ್ನು ನೇಮಿಸಿಕೊಂಡು ಕಾಡಿಗೆ ಬೆಂಕಿ ಜೀಳುವುದನ್ನು ತಡೆಗಟ್ಟುವ ಹಾಗೂ ನಿಯಂತ್ರಿಸುವ ಕಾರ್ಯಚಟುವಟಿಕೆಗಳನ್ನು ಮಾಡಲಾಗುತ್ತಿದೆ. ಇದಕ್ಕಾಗಿ ವಾರ್ಷಿಕ ಅಂದಾಜು ವೆಚ್ಚ 70 ಲಕ್ಷ ರೂಪಾಯಿಗಳಾಗಿದ್ದು ಈ ಪೈಕಿ ಬಂಡೀಪುರ ರಾಷ್ಟ್ರೀಯ ಉದ್ಯಾನವನದಲ್ಲಿ ಅಂದಾಜು 15 ಲಕ್ಷ ರೂಪಾಯಿ ವ್ಯಯ ಮಾಡಲಾಗುತ್ತಿದೆ. ಆದಕಾರಣ ರಾಷ್ಟ್ರೀಯ ಉದ್ಯಾನವನಗಳಲ್ಲಿ ಯಾವುದೇ ಆದಾಯದ ದೃಷ್ಟಿಕೋಣ ಅಥವಾ ಪ್ರದೇಶಕ್ಕೆ ಶಾಂತಿಭಂಗ ತರುವಂಥ ಚಟುವಟಿಕೆಗಳನ್ನು ಕೈಗೊಳ್ಳುವುದು ವನ್ಯಜೀವಿಗಳ ಹಾಗೂ ಅವುಗಳ ಆವಾಸಸ್ಥಾನ ರಕ್ಷಣೆ ಮತ್ತು ಪ್ರಕೃತಿದತ್ತ ಅಭಿವೃದ್ಧಿ ಹಿತದೃಷ್ಟಿಯಿಂದ ಸೂಕ್ತವಲ್ಲ. ಹಾಗೊಮ್ಮೆ ಅನಿವಾರ್ಯವಾದಲ್ಲಿ ರಾಜ್ಯಸರ್ಕಾರದ ವನ್ಯಜೀವಿ ಸಲಹಾಮಂಡಳಿಯ ಮುಂದೆ ಸಂಬಂಧಪಟ್ಟ ಸಮಸ್ಯೆಗಳನ್ನು ಮಂಡಿಸಿ ಅದರ ಅಭಿಪ್ರಾಯದ ಮೇರೆಗೆ ಕ್ರಮ ಜರುಗಿಸಲಾಗುವುದು.

(ಎ) ಮಂಗಳೂರು ಮಹಾನಗರ ಪಾಲಿಕೆಗೆ ಎಂ.ಆರ್.ಪಿ.ಎಲ್. ಇತ್ಯಾದಿ ಸಂಸ್ಥೆಗಳಿಂದ ಬಾಕಿ ಉಳಿದಿರುವ ಹಣ.

ಶ್ರೀ ಎಸ್. ಯೋಗೇಶ್ ಭಟ್ (ಮಂಗಳೂರು) : ಸನ್ಮಾನ್ಯ ಅಧ್ಯಕ್ಷರೆ, ರಾಜ್ಯಸರ್ಕಾರ ಬಡವರಿಗೊಂದು, ಶ್ರೀಮಂತರಿಗೊಂದು ನೀತಿಯನ್ನು ಅಳವಡಿಸುತ್ತಿದೆ ಎಂಬುದೇ ನನ್ನ ಒಂದು ಪ್ರಶ್ನೆ. ವಿಶೇಷವಾಗಿ ಉಳಿತಾಯ ಯೋಜನೆಯಲ್ಲಿ ಯಾರು ಕೆಲಸ ಮಾಡಿದ್ದಾರೆ ಅಂತಹ ಏಜೆಂಟರಿಗೆ ಕೊಡಬೇಕಾದಂಥ ಕಮೀಷನನ್ನು ಒಂದು ವರ್ಷದಿಂದ ಬಿಡುಗಡೆ ಮಾಡಿಲ್ಲ. ಎರಡನೆಯದಾಗಿ, ಕರ್ನಾಟಕ ಲಾಟರಿಯಲ್ಲಿ ಬಹುಮಾನ ಯಾರಿಗೆ ಬಂದಿದೆ, ಆ ಬಹುಮಾನವನ್ನು ಕೂಡ ಒಂದು ವರ್ಷದಿಂದ ಬಿಡುಗಡೆ ಮಾಡಿಲ್ಲ. ಇದು ಬಡವರಿಗೇ ಆದ ಒಂದು ನೀತಿ ಎಂದು ಇದ್ದರೆ, ಶ್ರೀಮಂತರಾದ ಎಂ.ಆರ್.ಪಿ.ಎಲ್. ಸಂಸ್ಥೆ, ಬಿ.ಎಸ್.ಎಫ್. ಎಂಬ ಸಂಸ್ಥೆ ಹಲವು ಕೋಟಿಗಳಷ್ಟು ಕೊಂಡಿದ್ದು ಅದನ್ನು ಮಂಗಳೂರು ಮಹಾನಗರಪಾಲಿಕೆಗೆ ಹಾಗೂ ಪ್ರಾಧಿಕಾರಕ್ಕೆ ಬಾಕಿ ಇಟ್ಟುಕೊಂಡಿದ್ದು ಅದನ್ನು ವಸೂಲಾತಿ ಮಾಡಲಿಕ್ಕೆ ನಿಮಗೆ ಸಾಧ್ಯವಾಗುತ್ತಿಲ್ಲ. ಹೈಕೋರ್ಟ್‌ನಿಂದ ಸ್ಟೇ ತಂದಿದ್ದಾರೆ. ಸುಮಾರು ಒಂದು ವರ್ಷದಿಂದ ಹೈಕೋರ್ಟ್‌ನಿಂದ ಸ್ಟೆ ತಂದರೂ ಕೂಡ ನಮ್ಮ ಕಾನೂನಿನ ವಿಭಾಗ ಯಾವುದೇ ರೀತಿಯಲ್ಲಿ ಅದನ್ನು ತೆರವು ಗೊಳಸಲಿಕ್ಕೆ ಶಕ್ತ ಆಗಿಲ್ಲವೋ ಎಂದು ಹೇಳುವಂಥ ಒಂದು